given specific assurance that the matter would be taken up, I stand committed to it. I was thinking of allotting a day for an educative debate on these matters. But, the question is of time. In fact, we tried, but it has not become possible to allot time. Therefore, hon. Member Sri Nanje Gowda need not feel worried about this matter. The matter will be definitely taken up during the next sitting.

Statement of the Chief Minister *re:* Krishna-Godavari Waters

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಅನುಮತಿಯನ್ನು ಪಡೆದು ಒಂದು ವಿಷಯವನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಮೊನ್ನೆತಾನೆ ಡೆಲ್ಲಿಗೆ ಕೃಷ್ಣಾ ಗೋದಾವರಿ ನೀರಿನ ಹಂಚಿಕೆಯ ಸಂಧಾನ ನಡೆಸತಕ್ಕ ಸಂದರ್ಭದಲ್ಲಿ ಹೋಗಿದ್ದರು. ಆದರೆ ಆ ವಿವಾದವನ್ನು ರಾಜೀ ಸಂಧಾನದ ಮೂಲಕ ವ್ಯವಹರಿಸುವುದು ಕೃಷ್ಣಾ ಗೋದಾವರಿ ನದಿಗಳ ಮೇಲ್ದಂಡೆಯಲ್ಲಿರತಕ್ಕವರ ನೀರಿನ ಹಿಂಗದ ಹಾಹಾಕಾರದಿಂದ ಮುರಿದು ಬಿತ್ತು ಎಂದು ಆಂಧ್ರದ ಮುಖ್ಯ ಮಂತ್ರಿಗಳಾದ ಬ್ರಹ್ಮಾನಂದ ರೆಡ್ಡಿಯವರು ಒಂದು ಹೇಳಿಕೆಯನ್ನು ಕೊಡುತ್ತಾ ಮಹಾರಾಷ್ಟ್ರ—ಮೈಸೂರುಗಳನ್ನು ಖಂಡನೆ ಮಾಡಿ ಮಾತನಾಡಿದ್ದಾರೆ. ಹಾಗೆ ಆ ರಾಜೀಸಂಧಾನಗಳು ಮುರಿದು ಬಿದ್ದಮೇಲೆ ಮತ್ತೆ ಹೊಸದಾಗಿ ಈಗ ಯಾವ ಷರತ್ತುಗಳಮೇಲೆ ಈ ನದಿಗಳ ನೀರಿನ ವ್ಯವಹಾರವನ್ನು ಪಂಚಾಯಿತಿಗೆ ಒಪ್ಪಿಸಿದ್ದಾರೆ–ಅನ್ನುವುದನ್ನು ಈ ಮಾನ್ಯ ಸಭೆಗೆ ತಿಳಿಸಬೇಕೆಂದು ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ಅಧ್ಯಕ್ಷರ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

1-30 P.M.

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಯವರು).—ಅಧ್ಯಕ್ಷರೇ, ಕೃಷ್ಣಾ ಗೋದಾವರಿ ನದಿಗಳ ನೀರಿನ ಹಂಚಿಕೆಯ ವಿಚಾರದಲ್ಲಿ ನಮಗೆ ನ್ಯಾಯ ದೊರೆಯಬೇಕಾಗಿದ್ದರೆ ನಾವು ಅಂದರೆ ಮೈಸೂರು ರಾಜ್ಯದವರು ಈ ವಿವಾದವನ್ನು ಆರ್ಬಿಟ್ರೇಷನ್ ಮುಂದೆ ತೆಗೆದುಕೊಂಡು ಹೋದರೆ ಅನುಕೂಲವಾಗುತ್ತದೆ ಎಂಬುದಾಗಿ ವಾದ ಮಾಡುತ್ತಿದ್ದೆವು. ಆದರೆ ಹಾಗೆ ಒಂದು ಆರ್ಬಿಟ್ರೇಷನ್ನಿನ ಅವಶ್ಯಕತೆ ಇಲ್ಲದೇನೇ ಸಂಧಾನದ ಮೂಲಕ ಇದಕ್ಕೆ ಒಂದು ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ಆಗುವುದಿಲ್ಲವೇ ಎಂಬುದನ್ನು ಕುರಿತು ಕೆಲವು ದಿನಗಳ ಹಿಂದೆ ಒಂದು ಸಂಧಾನ ನಡೆಯುತ್ತಿತ್ತು. ಇದೇ ಸಂದರ್ಭದಲ್ಲಿ ಮೂರು ರಾಜ್ಯಗಳಿಗೆ ಸಂಬಂಧಪಟ್ಟ ಹಾಗೆ ಮೂರು ಜನ ಮುಖ್ಯ ಮಂತ್ರಿಗಳೂ ದೆಹಲಿಯಲ್ಲಿ ಅನೇಕಾವರ್ತಿ ಸಭೆ ಸೇರಿ ಡೆಲ್ಲಿಯಲ್ಲಿ ಪ್ರಧಾನ ಸಚಿವರ ಸಮ್ಮುಖದಲ್ಲೂ ಆ ವಿಚಾರದಲ್ಲಿ ಮಾತುಗಳನ್ನಾಡಿದ್ದಾಯಿತು. ಆದರೆ ನಾವು ಯಾವ ಒಂದು ನಿರ್ಣಯಕ್ಕೂ ಬರಲಾಗಲಿಲ್ಲ. ಆದಕಾರಣ ಇದನ್ನು ಒಂದು ಆರ್ಬಿಟ್ರೇಷನ್ನಿಗೆ ಒಪ್ಪಿಸಬೇಕು ಎಂದು ಕೇಂದ್ರ ಸರ್ಕಾರದವರು ತೀರ್ಮಾನ ಮಾಡಿದರು. ಹಾಗೆ ತೀರ್ಮಾನವಾದ ಮೇಲೂ ಆರ್ಬಿಟ್ರೇಷನ್ನಿನ ಬಗ್ಗೆ ಒಂದು ಆರ್ಡರನ್ನು ಹೊರಡಿಸತಕ್ಕ ಕೊನೆಯ ಘಳಿಗೆಯವರೆಗೂ ಸಾಧ್ಯವಾಗುವುದಾದರೆ ಒಂದು ಸಂಧಾನವನ್ನು ಮಾಡಿ ಇದಕ್ಕೆ ಒಂದು ನಿರ್ಣಯವನ್ನು ಕಂಡುಕೊಂಡು ಇದನ್ನು ಮುಗಿಸೋಣ ಎಂಬುದಾಗಿ ಕೇಂದ್ರದ ಮಾನ್ಯ ಉಪಪ್ರಧಾನಿಗಳು ಕಟ್ಟಕಡೆಯದಾಗಿ ಇನ್ನೊಂದು ಪ್ರಯತ್ನ ಮಾಡೋಣ ಎಂದು ಕರೆಕೊಟ್ಟರು. ಹಾಗೆ ಉಪಪ್ರಧಾನಿಗಳಿಂದ ಪತ್ರ ಬಂದಮೇಲೆ ಮೂರು ಜನ ಮುಖ್ಯ ಮಂತ್ರಿಗಳೂ ದೆಹಲಿಯಲ್ಲಿ ಮತ್ತೆ ಸಭೆ ಸೇರಿದೆವು. ಅಲ್ಲಿ ಚರ್ಚೆಯನ್ನು ಪ್ರಾರಂಭ ಮಾಡುವುದಕ್ಕೆ ಮೊದಲು ಉಪಪ್ರಧಾನಿಗಳೇ ತಾವಾದರೂ ಒಂದು ಹೊಸ ವಿಷಯವನ್ನು ಕಂಡುಹಿಡಿದಿದ್ದರೆ ಅದನ್ನು ತಿಳಿಸಿದರೆ ಮುಂದೆ ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ, ಇಲ್ಲವಾದರೆ ನಾವೆಲ್ಲರೂ ಇಲ್ಲಿಯವರೆಗೆ ಅನೇಕಾವರ್ತಿ ಚರ್ಚೆ ಮಾಡಿದ್ದಾಗಿದೆ, ನಾವು ಎಲ್ಲರಿಗೂ ಒಪ್ಪಿಗೆಯಾಗತಕ್ಕಂಥ ಒಂದು ತೀರ್ಮಾನಕ್ಕೆ ಬರಲಾರದ ಕಾರಣ ಇದನ್ನು ಆರ್ಬಿಟ್ರೇಷನ್ನಿಗೆ ಒಪ್ಪಿಸಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೆವು, ಆದ್ದರಿಂದ ಅಂಥ ಯಾವುದಾದರೂ ಹೊಸ ಅಂಶ ಇದ್ದರೆ ತಿಳಿಸಬೇಕೆಂದು ಕೇಳಿದ್ದಕ್ಕೆ ಉಪಪ್ರಧಾನಿಗಳು ಅವರಲ್ಲಿ ಯಾವ ಒಂದು ಹೊಸ ಪ್ರಪೋಸಲ್ಲೂ ಇಲ್ಲ, ಅಖೈರಾಗಿ ಮೂರುಜನ ಮುಖ್ಯ ಮಂತ್ರಿಗಳೂ ಒಟ್ಟಾಗಿ ಕರೆತಂದು ಒಂದಾವರ್ತಿ ಚರ್ಚೆ ಮಾಡಿದರೆ

(ಶ್ರೀ ವೀರೇಂದ್ರ ಪಾಟೀರ್)

ಮಾಡಿದರೆ ಅವರು ಏನಾದರೂ ಎಲ್ಲರಿಗೂ ಅನುಕೂಲವಾಗತಕ್ಕ ಒಂದು ತೀರ್ಮಾನಕ್ಕೆ ಬರಲು ಸಾಧ್ಯವಾಗಬಹುದು, ಅದಕ್ಕಾಗಿ ಕರೆಸಲಾಗಿದೆ, ಆದ್ದರಿಂದ ಈ ಚರ್ಚೆಯನ್ನು ಮುಂದುವರಿಸ ಬೇಕೆಂದು ಅವರು ಕಳಕಳಿಯಿಂದ ಕೇಳಿಕೊಂಡರು. ಅದರಲ್ಲಿ ಬಹಳ ಮುಖ್ಯವಾದ ವಿಷಯ ಅಂದರೆ ಕೃಷ್ಣ ನದಿಯಲ್ಲಿ ಬರತಕ್ಕ, ಇರತಕ್ಕ, ನೀರಿನ ಪ್ರಮಾಣ ಎಷ್ಟು ಎಂಬುದನ್ನು ಕಂಡುಹಿಡಿಯಲು ಸಿ.ಡಬ್ಲ್ಯು.ಪಿ.ಡಿ. ಅವರ ಒಂದು ರಿಸರ್ಚ್ ಸ್ಟೇಷನ್ ಪೂನಾದಲ್ಲಿ ಇದೆ. ಅವರು ಇದರ ಬಗ್ಗೆ ಒಂದು ಅಖೈರು ತೀರ್ಮಾನ ಹೇಳಲು ಇನ್ನೂ ಎರಡೂ ಎರಡೂವರೆ ತಿಂಗಳ ಕಾಲಾವಕಾಶ ಬೇಕೆಂದು ಹೇಳುತ್ತಿದ್ದರು. ಹೀಗಿರುವಾಗ ನಾವು ಮೀಟಿಂಗ್ ಮಾಡಿ ಈಗ ನುಮಾರು ಒಂದು ವರ್ಷದಮೇಲೆ ಆಯಿತು. ಈಗಾಗಲೇ ರಿಜರ್ವ್ ಬಂದಿರಬಹುದು.—ಎಷ್ಟು ನೀರು ಇದೆಯೆಂಬುದನ್ನು ಹೇಳಿದರೆ ಮುಂದೆ ಇದರ ಬಗ್ಗೆ ಚರ್ಚೆಮಾಡುವುದಕ್ಕೆ ಅವಕಾಶವಾಗುತ್ತದೆ ಎಂಬುದಾಗಿ ಹೇಳಿದಾಗ, ಸಂಬಂಧಪಟ್ಟ ಇರಿಗೇಷನ್ ಮಿನಿಸ್ಟ್ರಿ ಅಧಿಕಾರಿಗಳು ಈಗ ಅದನ್ನು ಎಕ್ಸ್‌ಪರಿಮೆಂಟ್ ಮಾಡುತ್ತಿದ್ದಾರೆ, ಆ ಎಕ್ಸ್‌ಪರಿಮೆಂಟ್ ಇನ್ನೂ ಪೂರ್ತಿಯಾಗಿಲ್ಲ, ಅದು ಪೂರ್ತಿ ಆಗಬೇಕಾದರೆ, ಇನ್ನೂ ಎರಡು, ಎರಡೂವರೆ ಅಥವಾ ಮೂರು ತಿಂಗಳುಗಳವರೆಗೆ ಆಗುತ್ತದೆಂದು ಹೇಳಿದರು. ಈಗಾಗಲೇ ನಾವು ಏನು ಎಕ್ಸ್‌ಪರಿಮೆಂಟ್ ಮಾಡಿದ್ದೇವೆಯೋ ಅದರ ರಿಜಲ್ಟನ ಮೇಲೆ ಚರ್ಚೆಮಾಡಬಹುದು ಎಂಬುದಾಗಿ ಹೇಳಿದರು. ಇಲ್ಲಿಯವರೆಗೂ ಮಾಡಿದ ಎಕ್ಸ್‌ಪರಿಮೆಂಟ್ ಪ್ರಕಾರ ಸೇಕಡ 75ರಷ್ಟು ಡಿಪೆಂಡಬಿಲಿಟಿ ಮೇಲೆ ಹೋದರೆ, 2,176 ಟಿ. ಎಂ. ಸಿ. ಎಫ್. ಟಿ. ಬರುತ್ತದೆ. 50 ವರ್ಷಗಳ ವಿಜಯವಾಡ ಗೇಜಿಂಗ್ ರಿಜರ್ವ್ ನೋಡಿ ಈ ಎಕ್ಸ್‌ಪರಿಮೆಂಟ್ ಮಾಡಿದ್ದಾರೆ. ಇದೇ ಕೊನೆಯ ಅಭಿಪ್ರಾಯವೆಂದು ಹೇಳುವುದಕ್ಕಾಗುವುದಿಲ್ಲವೆಂದು ಹೇಳಿದಾಗ, ನಾವು ಒಬ್ಬರು ಮಂತ್ರಿಗಳು ಆ 2,176 ಟಿ.ಎಂ.ಸಿ.ಎಫ್ ಟಿ. ಯ ಆಧಾರ ಇಟ್ಟುಕೊಂಡು ಅದರಮೇಲೆ ಯಾವರೀತಿ ಹಂಚಿಕೊಳ್ಳಬೇಕೆಂದು ಹೇಳಿದಾಗ, ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಈಗ ಏನೊಂದು ಪ್ರಮಾಣ ಹೇಳಿದ್ದಾರೋ ಅದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ, ಇನ್ನೂ ಎಕ್ಸ್‌ಪರಿಮೆಂಟ್ ಮಾಡಬೇಕಾಗಿದೆ, ಇನ್ನೂ ನಮ್ಮ ಚೀಫ್ ಇಂಜಿನಿಯರ್‌ಅವರು ಮತ್ತು ರಿಸರ್ಚ್ ಸ್ಟೇಷನ್ ಆಫೀಸರ್‌ಅವರು ಯಾವರೀತಿ ಹೇಳಿದ್ದಾರೋ ಆ ಪ್ರಕಾರ ಎಕ್ಸ್‌ಪರಿಮೆಂಟ್ ನಡೆಯುತ್ತಿದೆ, ಆದುದರಿಂದ ಇದನ್ನೇ ಅಂತಿಮ ಫಿಗರ್ ಎಂದು ತಿಳಿದುಕೊಂಡು ಚರ್ಚೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದಾಗ, ಈ ನೀರಿನ ಪ್ರಮಾಣದ ಬಗ್ಗೆ ಮತ ಭೇದವಿರುವುದರಿಂದ ಇದನ್ನು ಚರ್ಚೆಮಾಡುವುದರಿಂದ ಏನೂ ಪ್ರಯೋಜನವಿಲ್ಲ ಚರ್ಚೆಮಾಡುವುದಕ್ಕೆ ಸಾಧ್ಯವಿಲ್ಲದೇ ಇರತಕ್ಕ ಪರಿಸ್ಥಿತಿ ಇರುವುದರಿಂದ ಇದನ್ನು ನೇರವಾಗಿ ಆರ್ಬಿಟ್ರೇಷನ್ನಿಗೆ ಒಪ್ಪಿಸಬೇಕೆಂದು ಉಪ ಪ್ರಧಾನ ಮಂತ್ರಿಗಳಿಗೆ ಹೇಳಿದಾಗ ಅವರು ನೇರವಾಗಿ ಇದನ್ನು ಆರ್ಬಿಟ್ರೇಷನ್ನಿಗೆ ಒಪ್ಪಿಸಿ ಎಂದು ಸಂಬಂಧಪಟ್ಟ ಮಿನಿಸ್ಟ್ರಿಗೆ ತಿಳಿಸುತ್ತೇನೆಂದು ಹೇಳಿದರು. ಇನ್ನು ಇವಕ್ಕೆ ಒಂದು ಟ್ರಿಬ್ಯೂನಲ್ಲೋ ಅಥವಾ ಎರಡು ಟ್ರಿಬ್ಯೂನಲ್ಲೋ ಇರಬೇಕು ಎನ್ನುವ ವಿವಾದ ಇತ್ಯರ್ಥವಾಗಿಲ್ಲ. ಅದರ ಬಗ್ಗೆ ಯಾವ ಚರ್ಚೆಯನ್ನೂ ಮಾಡುವುದಿಲ್ಲವೆಂದು ವಿಚಾರ ಅವರಿಂದ ಕಂಡು ಬಂದಿದ್ದರಿಂದ, ಟ್ರಿಬ್ಯೂನಲ್‌ಗೆ ಇದನ್ನು ವಹಿಸಬೇಕೆಂದು ನಿರ್ಣಯ ಮಾಡಿದೆ.

ಶ್ರೀ ಎಸ್. ಗೋಪಾಲಗೌಡ.—ಆಂಧ್ರದ ಮುಖ್ಯ ಮಂತ್ರಿಗಳು ಇದು ಇಂಗದ ದಾಹವೆಂದು ಹೇಳಿದ್ದಾರೆ. ಆ ಮಾತಿನಿಂದ ನಿಮ್ಮದು ಇಂಗದ ದಾಹವೆಂದು ತೆಗೆದುಕೊಳ್ಳುವುದೋ ಅಥವಾ ಬೇಡವೋ ?

ಶ್ರೀ ವೀರೇಂದ್ರ ಪಾಟೀರ್.—ನಾನು ಇಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡಿದಾಗ ಅಥವಾ ಪ್ರೆಸ್ಸಿಗೆ ಹೇಳಿದಾಗ ಅವರಿಗೆ ಮನಸ್ತಾಪವಾಗಿರಬಹುದು. ಈಗ ಹೇಳಿರುವ ಹಾಗೆ ಅವರು ಕೊಟ್ಟ ಫಿಗರ್ಸ್‌ಗೆ ಒಪ್ಪಿದ್ದರೆ, ಅಲ್ಲ ಇದರ ಚರ್ಚೆಗೆ ಅವಕಾಶವಿರುತ್ತಿತ್ತು. ಈ ಚರ್ಚೆಯಾಗದೇ ಇರುವುದಕ್ಕೆ ನಾನೇ ಕಾರಣ ಇದ್ದೇನೆ. ಆ ಮುಖ್ಯಮಂತ್ರಿಗಳು ಬೇಸತ್ತು ಮನಸ್ಸಿಗೆ ನೊಂದುಕೊಂಡು ಇಂಗದ ದಾಹ ಎಂದು ಹೇಳಿರುವುದಾಗಿದೆ. ನಮಗೆ ದಾಹವಿಲ್ಲ. ನಮಗೆ ನಮ್ಮಪಾಲು ಬೇಕು ಎಂದಾಗ, ಕಡಿಮೆ ಇರುವವರು ಕಡಿಮೆ ಇದೆಯೆಂದಾಗ, ಮೇಲಿನ ರಾಜ್ಯಗಳಿಗೆ ಕಡಿಮೆ ನೀರು ಹಂಚುವಾಗ, ಉಳಿಕೆಯ ನೀರು ಏನು ಮಾಡಬೇಕೆಂಬುದು ಬರುತ್ತದೆ. ಆದ್ದರಿಂದ ನಮಗೆ ಹೆಚ್ಚು ದಾಹ ಇದೆಯೆಂಬ ಆ ಒಂದು ಅರ್ಥದಲ್ಲಿ ಅವರು ಮಾತನಾಡಿರಬಹುದು.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋರಾರ).—ಸ್ವಾಮಿ, ನಾನು ಒಂದು ಕಾರ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದೆ, ಕೋರಾರದಲ್ಲಿ ನೀರಿನ ಅಭಾವ ತುಂಬಾ ಜಾಸ್ತಿಯಾಗಿದೆ ಎಂದು. ಇದುವರೆಗೂ ನನ್ನ ಕಾರ್ ಅಟೆನ್‌ಷನ್ ನೋಟೀಸ್ ಬರಲಿಲ್ಲ. ಅದು ಏನಾಯಿತು ಎಂಬುದು ಗೊತ್ತಾಗಲಿಲ್ಲ.

ಅಧ್ಯಕ್ಷರು.—ಈಗ ತಾವು ಆ ಪಾಯಿಂಟ್ ರೈಜ್ ಮಾಡಬೇಡಿ.

ಶ್ರೀ ಪಿ. ವೆಂಕಟಗಿರಿಯಪ್ಪ.—ಪತ್ರಿಕೆಗಳಲ್ಲಿ ಕೂಡ ಬಂದಿದೆ ಕೋರಾರದಲ್ಲಿ ಜನಗಳಿಗೆ ಕುಡಿಯುವುದಕ್ಕೆ ನೀರು ಇಲ್ಲದೆ ಅವರು ಬೇರೆ ಕಡೆ ಹೋಗುವ ಪರಿಸ್ಥಿತಿ ಬಂದಿದೆ. ಇಷ್ಟಾದರೂ ಸಹ ಸರ್ಕಾರದವರು ನನ್ನ ಕಾಲ್ ಅಟೆನ್‌ಷನ್ ಬಗ್ಗೆ ಉತ್ತರವನ್ನು ಓದಿಸದೆ ಇದ್ದುದರ ವಿರುದ್ಧ ಪ್ರತಿಭಟನೆ ಮಾಡಿ ನಾನು ಸಭಾತ್ಯಾಗ ಮಾಡುತ್ತೇನೆ.

Mr. SPEAKER.—Next, Legislative Business. Hon. Member Sri H. B. Jwalanaiah.

Sri M. NAGAPPA.—I rise to a point of order, Sir, my point of order is in respect of rule 311 read with rule 288 and other provisions of the Rules of Procedure.

Mr. SPEAKER.—I have already decided that point. There is no point of order.

Sri M. NAGAPPA.—I am requesting the Hon. Chair to reconsider it.

Mr. SPEAKER.—I am not permitting it.

Sri M. NAGAPPA.— * * *

2-00 P.M.

Mysore Land Revenue (Second Amendment) Bill, 1969

Motion to Consider—(Debate contd.)

†ಶ್ರೀ ಹೆಚ್. ಬಿ. ಜ್ವಾಲನಯ್ಯ (ಹಾನನ).—ಸನ್ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಅದು ಹಿಂದೆ ಇದ್ದೇ ಮಾನ್ಯ ರೆವಿನ್ಯೂ ಸಚಿವರು ಮಂಡಿಸಿದಂಥ ಈ ಒಂದು ಸೆಕೆಂಡ್ ಅಮೆಂಡ್‌ಮೆಂಟ್ ಬಿಲ್ ಏನು ಇದೆ ಅದು ಹಿಂದೆ ಇದ್ದೇ ಸಭೆಯಲ್ಲಿ ನಡೆದಂಥ ಒಂದು ಧಾರಣೆ ಮುಷ್ಕರದ ಪ್ರತಿಫಲದಿಂದ ಬಂದಂಥ ಒಂದು ಅಮೆಂಡ್‌ಮೆಂಟ್. ಆ ಸಂದರ್ಭದಲ್ಲಿ ಮಾನ್ಯ ರೆವಿನ್ಯೂ ಸಚಿವರು ನಾನು ಒಂದು ಕಾಂಪ್ರಹೆನ್ಸಿವ್ ಅಮೆಂಡ್‌ಮೆಂಟನ್ನು ಈ ಸಭೆಯ ಮುಂದೆ ಮಂಡಿಸುತ್ತೇನೆಂದು, ಭರವಸೆ ನೀಡಿದ್ದರು. ಈವಾಗ ಅವರು ಈ ಸಭೆಯ ಮುಂದೆ ಮಂಡಿಸಿದಂಥ ತಿದ್ದುಪಡಿ ಏನು ಇದೆ ಇದರಲ್ಲಿ ಕೇವಲ ಒಂದೆರಡು ಅಂಶವಾತ್ರ ಬಿಟ್ಟರೆ ಇದು ಸಮಗ್ರವಾದಂಥ ತಿದ್ದುಪಡಿ ಅಲ್ಲ ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಏತಕ್ಕೆಂದರೆ ಈ ಭೂ ತೆರಿಗೆ ಏನು ಇದೆ ಅದು ಸುಮಾರು 3-4 ವರ್ಷಗಳಿಂದ ರೈತನಮೇಲೆ ಬಾಕಿ ನಿಂತಿದ್ದು ಈಗ ಅದರ ವಸೂಲಿಯ ವಿಚಾರದಲ್ಲಿ ಉಗ್ರ ಕ್ರಮ ಕೈಗೊಂಡು ವಸೂಲ್ಮಾಡಬೇಕೆಂದು ಸುತ್ತೋಲೆಯ ಮುಖಾಂತರ ಅಧಿಕಾರಿಗಳಿಗೆ ತಿಳುವಳಿಕೆ ಕೊಟ್ಟಿದ್ದಾರೆ. ಇದರಿಂದ ಅಧಿಕಾರಿಗಳು ರೈತರಿಗೆ ಕಿರುಕುಳ ಕೊಟ್ಟ ಪರಿಣಾಮವಾಗಿ ದೇಶದಲ್ಲಿ ಹಾಹಾಕಾರ ಎದ್ದಿರುವುದರಿಂದ ಈ ಸಭೆಯಲ್ಲಿ ಅದನ್ನು ಪ್ರತಿಭಟಿಸಬೇಕಾಗಿದೆ. ಮೊದಲು ಭೂಕಂದಾಯ ಏನು ಇತ್ತು ಅದನ್ನು ಹಾಕಬೇಕೋ ಬೇಡವೋ ಅನ್ನುವ ಬಗ್ಗೆ ಒಂದು ವಾದ ದೇಶದಲ್ಲಿ ಎದ್ದಿದೆ.

ಮೊಟ್ಟ ಮೊದಲು ಶ್ರೀ ಸಿ. ರಾಜಗೋಪಾಲಚಾರಿ ಅವರು ಹೇಳಿದರು, ಮಳೆ ನೀರಿನಿಂದ ನೀರನ್ನು ಪಡೆದು ರೈತ ಯಾವ ಕೃಷಿಯನ್ನು ಮಾಡುತ್ತಾನೆ ಅಂಥ ಕೃಷಿಮೇಲೆ ತೆರಿಗೆಯನ್ನು ವಿಧಿಸುವುದಕ್ಕೆ ಸರ್ಕಾರಕ್ಕೆ ಯಾವ ರೀತಿಯಿಂದಲೂ ಹಕ್ಕು ಇಲ್ಲ ಎಂದು. ಹಿಂದಿನಿಂದಲೂ ಇರುವಂಥ ಕೆರೆಯಿಂದ ನೀರನ್ನು ತೆಗೆದುಕೊಂಡು ನೀರಾವರಿ ಮಾಡತಕ್ಕ ಅಥವಾ ಮಳೆ ನೀರನ್ನು ಉಪಯೋಗ ಮಾಡಿಕೊಂಡು ವ್ಯವಸಾಯವನ್ನು ಮಾಡತಕ್ಕ ರೈತರಿಗೆ ಆ ಭೂಮಿಯಮೇಲೆ ಕಂದಾಯವನ್ನು ವಿಧಿಸುವುದು ಸರಿಯಾದ ಮಾರ್ಗವಲ್ಲ ಎಂದು ಹೇಳಿದ ಮೇಲೆ, ಇದು ಸಾರ್ವಜನಿಕರ ಮತ್ತು ರೈತರ

---

* * * Matter not recorded as ordered by the Chair.